# ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯಃ ಕೊಪ್ಪ

## ಸಿ.ಸಿ. ನಂ.*659/2022*

| | | |
|---|---|---|
| ಫಿರ್ಯಾದುದಾರರು | ಃ | ಸರ್ಕಾರದ ಪರವಾಗಿ ಬಾಳೆಹೊನ್ನೂರು ಪೊಲೀಸರು |

## ವಿರುದ್ಧ

| | | |
|---|---|---|
| ಆರೋಪಿ/ತರು | 1 | ಚಿನ್ನಯ್ಯ ಬಿನ್ ಮಂಜಯ್ಯ, 38 ವರ್ಷ, ಕೂಲಿ ಕೆಲಸ, ವಾಸ ತುಪ್ಪೂರು, ಹಿರೇಗದ್ದೆ ಗ್ರಾಮ, ಕೊಪ್ಪ ತಾಲ್ಲೂಕು. |
| | 2 | ಸುರೇಶ ಬಿನ್ ನಾಗಯ್ಯ, 32 ವರ್ಷ, ಕೂಲಿ ಕೆಲಸ, ವಾಸ ತುಪ್ಪೂರು, ಅಡಿಗೆಬೈಲು ಗ್ರಾಮ, ಕೊಪ್ಪ ತಾಲ್ಲೂಕು. |
| | 3 | ಬಿ.ಜಿ. ಪೂರ್ಣೇಶ ಬಿನ್ ಗೋಪಾಲ, 24 ವರ್ಷ, ಕೂಲಿ ಕೆಲಸ, ವಾಸ ಬಿಂತ್ರುವಳ್ಳಿ, ಮೇಗರಮಕ್ಕಿ ಗ್ರಾಮ, ನ.ರಾ.ಪುರ ತಾಲ್ಲೂಕು. |
| | 4 | ನಾಗೇಶ ಬಿನ್ ಸುಂದರ, 25 ವರ್ಷ, ಕೂಲಿ ಕೆಲಸ, ವಾಸ ಮೇಗರಮಕ್ಕಿ ಗ್ರಾಮ, ನ.ರಾ.ಪುರ ತಾಲ್ಲೂಕು. |
| | 5 | ಪುನೀತ್ ಟಿ.ಎಸ್ ಬಿನ್ ಸುಬ್ಬಯ್ಯ, 25 ವರ್ಷ, ಚಾಲಕ, ವಾಸ ತುಪ್ಪೂರು, ಹಿರೇಗದ್ದೆ ಗ್ರಾಮ, ಕೊಪ್ಪ ತಾಲ್ಲೂಕು. |

## ದೋಷಾರೋಪಣೆ

ಐಶ್ವರ್ಯ ಚಿದಾನಂದ್ ಪಟ್ಟಣಶೆಟ್ಟಿ, ಬಿ.ಕಾಂ., ಎಲ್.ಎಲ್.ಎಂಃ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ಕೊಪ್ಪ ಆದ ನಾನು ಮೇಲ್ಕಂಡ ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕ 14.12.2021 ರಂದು ಬೆಳಿಗ್ಗೆ 11.30 ಗಂಟೆ ಸಮಯದಲ್ಲಿ ಬಾಳೆಹೊನ್ನೂರು ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಅಡಿಗೆಬೈಲು ಗ್ರಾಮದ ಸಿಗಸೆ ವಾಸ ಚಾಸಾ.1 ಶ್ರೀನಿವಾಸ್ ಎಸ್. ಎನ್. ರವರಿಗೆ ಸೇರಿದ ಅಡಿಗೆಬೈಲು ಗ್ರಾಮದ ಸ.ನಂ. 159 ರಲ್ಲಿ ಬೆಳೆದಿದ್ದ ಸುಮಾರು 25-30 ವರ್ಷದ ಅಡಿಕೆ ಮರಗಳ ಪೈಕಿ ಸುಮಾರು 47 ಅಡಿಕೆ ಮರಗಳನ್ನು 1 ರಿಂದ 4 ನೇ ಆರೋಪಿಗಳಾದ ನೀವು ಕಡಿದು ಬೀಳಿಸಿ, ಕಡಿದ ಅಡಿಕೆ ಮರಗಳಿಂದ ರೂ.10,500/- ಬೆಲೆಯ ಬಾಳುವ 212 ಕೆ.ಜಿ. ಅಡಿಕೆ ಕಾಯಿಗಳನ್ನು ಅಪ್ರಮಾಣಿಕತನದಿಂದ ಕಳ್ಳತನ ಮಾಡಿ, ಭಾರತ ದಂಡ ಸಂಹಿತೆ ಕಲಂ **379** ರ ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುತ್ತೀರಿ.

13/12/24

ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ರಿಂದ 4ನೇ ಆರೋಪಿತರಾದ ನೀವು ಚಾಸಾ-1 ಶ್ರೀನಿವಾಸ್ ಎಸ್. ಎನ್. ರವರಿಗೆ ಸೇರಿದ ಮೇಲ್ಕಂಡ ಅಡಿಕೆ ತೋಟದಲ್ಲಿ ಸುಮಾರು 25-30 ವರ್ಷದ ಹಳೆಯ 47 ಅಡಿಕೆ ಮರಗಳನ್ನು ಕಡಿದು ರೂ.89,500/- ಗಳಷ್ಟು ನಷ್ಟವನ್ನುಂಟು ಮಾಡಿ ಭಾ.ದಂ.ಸಂ.ಕಲಂ **427** ರ ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುತ್ತೀರಿ ಎಂದೂ,

ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 5ನೇ ಆರೋಪಿಯಾದ ನೀವು ಕೆಎ 18/ಬಿ-3591 ನಂಬರಿನ ವಾಹನಕ್ಕೆ ಚಾಲನಾ ಪರವಾನಿಗೆ ಇಲ್ಲದೇ ಸದರಿ ವಾಹನವನ್ನು ಸಾರ್ವಜನಿಕ ರಸ್ತೆಯಲ್ಲಿ ಚಾಲನೆ ಮಾಡಿ ಮೋಟಾರು ವಾಹನ ಕಾಯ್ದೆ ಕಲಂ **181ರ** ಅಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರೆಂದು ಆರೋಪಣೆ ಹೊರಿಸಲಾಗಿದೆ.

5ನೇ ಆರೋಪಿಯಾದ ನೀವು ನಿಮ್ಮ ಬಾಬ್ತು ಕೆಎ 18/ಬಿ-3591 ನಂಬರಿನ ವಾಹನಕ್ಕೆ ಪರವಾನಿಗೆ **ಚಾಲ್ತಿಯಲ್ಲಿ ಇಲ್ಲದೆ** ಇದ್ದು, 1 ರಿಂದ 4ನೇ ಆರೋಪಿತರು ಕದ್ದ ಅಡಿಕೆ ಕಾಯಿಯ ಮೂಟೆಗಳನ್ನು ಸದರಿ ವಾಹನವನ್ನು ಸಾಗಾಣಿಕೆ ಮಾಡಿ ಮೋಟಾರು ವಾಹನ ಕಾಯ್ದೆ ಕಲಂ **196ರ** ಅಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರೆಂದು ಆರೋಪಣೆ ಹೊರಿಸಲಾಗಿದೆ.

ಪ್ರ:1ಃ ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತೆ?

ಉಃ ಆ-1 ತಿಳಿಯಿತು ಆ-2 ತಿಳಿಯಿತು

ಆ-3 " ಆ-4 "

ಆ-5 "

ಪ್ರ:2ಃ ತಪ್ಪು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆ ಆಗಬೇಕಾ?

ಉಃ ಆ-1 ಒಪ್ಪಿಕೊಳ್ಳುತ್ತಿಲ್ಲ ವಿಚಾರಣೆಯಾಗಬೇಕು ಆ-2 ಒಪ್ಪಿಕೊಳ್ಳುತ್ತಿಲ್ಲ ವಿಚಾರಣೆಯಾಗಬೇಕು

ಆ-3 " " ಆ-4 " "

ಆ-5 " "

ಈ ಮೇಲ್ಕಂಡ ದೋಷಾರೋಪಣೆಯನ್ನು ನಾನೇ ಸ್ವತಃ ಆರೋಪಿತರಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ 13/12/2024

13/12/2024

(ಐಶ್ವರ್ಯ ಚಿದಾನಂದ್ ಪಟ್ಟಣಶೆಟ್ಟಿ)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧನ್ಯಾದಂಃ ಕೊಪ್ಪ.